ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಗ್ರ್ಯಾಂಟ್-ಇನ್ ಏಡ್-ಕೋಡನ್ನು ಅನ್ವಯಿಸುವುದು ಕಷ್ಟವಾಗುತ್ತದೆ. ಏಕೆಂದರೆ ಅವರು ಹೆಚ್ಚು ಫೀಜನ್ನು ವಸೂಲು ಮಾಡುತ್ತಿದ್ದಾರೆ. ಅಲ್ಲದೆ ಸಂಬಳಗಳನ್ನು ನರಕಾರ ಗೊತ್ತು ಮಾಡಿರುವಂತೆ ಅವರು ಕೊಡಬೇಕಾಗುತ್ತದೆ. ಹಾಗೆ ಮಾಡದೆಯಿರುವುದರಿಂದ ಅವರಿಗೆ ಸಹಾಯ ಮಾಡುವುದಕ್ಕೆ ಬೇರೆ ಯೋಚನೆ ಮಾಡಬೇಕಾಗುತ್ತದೆ. ಕೋಡಿನ ಪ್ರಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಇ. ನಾರಾಯಣ ಗೌಡ.—ಕೆಲವು ಖಾಸಗಿ ಜನರು ನಡೆಸುತ್ತಿರುವ ಸ್ಕೂಲುಗಳಿಗೆ ಗ್ರ್ಯಾಂಟನ್ನು ಕೊಡುತ್ತಿದ್ದೀರಿ, ಇದಕ್ಕೇಕೆ ಕೊಡುವುದಿಲ್ಲ ?

ಶ್ರೀ ಎಸ್. ಆರ್. ಕಂಠಿ.—ಗ್ರ್ಯಾಂಟು ಮತ್ತಿತರ ಸೌಲಭ್ಯ ಬೇಕೆಂದರೆ ನಮ್ಮ ಗ್ರ್ಯಾಂಟ್-ಇನ್ ಏಡ್ ಕೋಡಿನ ಪ್ರಕಾರ ನಡೆದರೆ ಎಲ್ಲವೂ ಸಿಕ್ಕುತ್ತದೆ.

ಶ್ರೀ ಗಂಗಾಧರ ನಾಮೋಷಿ.—ಇಂಗ್ಲಿಷ್ ಮಾಧ್ಯಮವಿರುವ ಸ್ಕೂಲುಗಳಲ್ಲಿ ಬೇರೆ ಬೇರೆ ಮೈನಾರಿಟೀಸ್ ಭಾಷೆಗಳವರು ಬಂದು ಓದುತ್ತಿದ್ದಾರೆ, ಅದಕಾರಣ ಫೀಜು ಹೆಚ್ಚು ಹಾಕುತ್ತಿದ್ದಾರೆ. ನರಕಾರ ಗ್ರ್ಯಾಂಟನ್ನು ಕೊಟ್ಟಿದ್ದರೆ ಅವರು ಫೀಜನ್ನು ಹೆಚ್ಚು ಮಾಡುತ್ತಿರಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅವರೂ ಬೇಕಾದರೆ ಗ್ರ್ಯಾಂಟ್-ಇನ್-ಏಡ್ ಕೋಡ್‌ನಲ್ಲಿ ಬರಬಹುದು. ಈಗ ಕೆಲವರು ಬಂದಿದ್ದಾರೆ ಮತ್ತೆ ಕೆಲವರು ಬಂದಿಲ್ಲ. ವಿದ್ಯಾರ್ಥಿಗಳ ದೃಷ್ಟಿಯಿಂದ ಈ ಪ್ರಶ್ನೆಯನ್ನು ನೋಡುವುದಕ್ಕಾಗುವುದಿಲ್ಲ, ಗ್ರ್ಯಾಂಟ್-ಇನ್-ಏಡ್ ಕೋಡ್‌ನ ದೃಷ್ಟಿಯಿಂದ ಮತ್ತು ಸ್ಕೂಲಿನ ದೃಷ್ಟಿಯಿಂದ ನೋಡಬೇಕಾಗುತ್ತದೆ.

———

Drinking water wells sunk for the use of Scheduled Castes, in the Villages of Bangarpet Taluk.

*Q.—262. Sri S. RAJAGOPAL (K. G. F).—

Will the Government be pleased to state :—

(*a*) the number and names of villages in Bangarpet Taluk in which drinking water wells have been sunk for the use of Scheduled Castes during the First and Second Plan periods and up-to-date during the Third Plan ;

(*b*) the names of villages in the same taluk wherein such wells are needed but not provided yet ;

(*c*) the programme and plan of the Government to meet this vital need ?

A.—Smt. YASHODARA DASAPPA (Minister for Social Welfare).—

(*a*) 10, as below :—

1. Kamasandra
2. Ivarahalli
3. Deshihalli
4. Narayanapura Majara Hudukula
5. Chickvalgamadi
6. Yalesandra Mazara Ramasandra
7. Kendaranahalli
8. Ithandahalli
9. Vadapura
10. Chinchandahalli

(*b*) *Vide* statement given below.

(*c*) The demand will be met by Government according to the Plan programme every year under Plan schemes to the extent that funds are available and also on the basis of Scheduled Castes population. The Social Welfare Department is only supplementing the efforts of the Development, Panchayati Raj and Co-operation Department.

STATEMENT.

The names of villages in Bangarpet Taluk wherein wells are needed but not provided yet.

Sl. No.	*Name of the Circle*		*Name of Village*
1	Karahally	...	1 Thimmapura
2	Chickankandhally	...	1 Parakarahally 2 Bavarahally
2	Saregowdanakote	...	1 Kathihally 2 Devaganahally 3 Deshihally 4 Thattanahally 5 Keelakoppa 6 Makarahally 7 Paravahally
4	Hulebele	...	1 Karamangala 2 Guttahally 3 Thevanahally 4 Madamangala 5 Hanchala 6 Mageri
5	Magondi	...	1 Magondi 2 Hirekarapanahally 3 Hurlahally
6	Budikote	...	1 Budikote 2 Ukkunda 3 Junjanahally 4 Karimanahally 5 Yalasandra 6 Mugarahally 7 Bavvannahally 8 Yachamanahally
7	Kamasandra	...	1 Kamasandra 2 Kottigal 3 Kalavanchi 4 Bangaranatta 5 Chamarahally 6 Bandaralahally 7 Rathenahally

(SMT YESHODHARA DASAPPA)

Sl. No.	Name of the Circle		Name of Village	
8	Bodagurki	...	1	Arimanchally
			2	Karthepura
9	Battalahally	...	1	Nagarahally
			2	Kadamandahally
			3	Sentiganahalli
			4	Donimadugu
			5	Thanmandagu
10	Bethamangala	...	1	Nayanahalli
			2	Kavargunahally
			3	Gennerahally
11	Kammasandra	...	1	Maliganagurki
			2	Chigarapura
			3	Isasandra
			4	Byraganahalli (Bovies)
			5	Reddyhally
			6	Thathahally
12	Gollahally	...	1	Natta
			2	Chinnapallay
			3	Gollahally
13	Vengasandra	...	1	Annasagara
			2	Siddareddydinne
			3	Gollahally
14	Kyasambally	...	1	Thookal
			2	Kaverahally
			3	Muddegowdanahally
			4	Jangamanahally
			5	Billarahally
			6	Madivala
15	Kangandlahally	...	1	Kangandlahally
			2	Kasireddy Gandlahally
			3	Gollaguravamahally
			4	Jakkarasakuppa
			5	Maradaghatta
			6	Thatireddyhally
			7	Sanganahally
			8	Doddagandlahally

Sl. No.	Name of the Circle	Name of village
16	Ramasandra	1 Ramasandra
		2 Srin vasandra
		3 Banavara
		4 Peelavara
		5 Chinchandlahally
		6 Kadripura
		7 Dalavaihosahally
		8 Mothakapally
		5 Voddarahally
		10 Lallampally
17	Kempapura	1 Lakkenahalli
		2 Madamanagal
		3 Chokkalabande
		4 Jodi Kuvoor
		5 Lakshmisagara
		6 Thongal
18	Doddur Karapanahally	1 Gollahally
		2 Chinnepally
		3 Mettar
19	Doddavalagamadi	1 Kesanahally
		2 Ajjapanahalli
		3 Chinahalli
20	Balamanda	1 Nagarahalli
		2 Karimanahalli
		3 Sortiganahalli
		4 Gullahally

Sri S. RAJAGOPAL.—May I have the break-up figures for all these ten wells ?

†ಶ್ರೀಮತಿ ಯಶೋಧರ ದಾಸಪ್ಪ.—ಬ್ರೇಕಪ್ ಫಿಗರ್ಸ್ ಈಗ ನನ್ನಲಲ್ಲಿ, ಒಟ್ಟು 10 ಇವೆ; ಬ್ಲಾಕ್ಸ್‌ನಲ್ಲಿರುವುದು ಎರಡೂ ಸೇರಿ 12 ಆವೆ.

Sri S. RAJAGOPAL.—May I know the amount spent for these wells ?

ಶ್ರೀಮತಿ ಯಶೋಧರ ದಾಸಪ್ಪ.—ಆ ವಿವರಗಳು ಇಲ್ಲ; ಸಾಧ್ಯವಾದಷ್ಟು ಮಾಡಲಾಗಿದೆ, ಮಾಡಬೇಕಾದುದು ಇನ್ನೂ ಬೇಕಾದಷ್ಟಿದೆ, ಈ ವರ್ಷ ಎಲ್ಲಿ ಬೇಕೋ ಅಲ್ಲಿ ಕೊಡುವುದಕ್ಕೆ ಡೆಪ್ಯುಟಿ ಕಮೀಷನರ್ ಅವರಿಗೆ 15 ಸಾವಿರ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಇ. ನಾರಾಯಣ ಗೌಡ.—ಮೂರು ಯೋಜನೆಗಳು ಕಳೆದರೂ ಇನ್ನೂ 96 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲವೆಂದು ಹೇಳಿದ್ದೀರಿ, ಇನ್ನು ಎಷ್ಟು ಯೋಜನೆಗಳನ್ನು, ಸರಕಾರ ಹಾಕಿದಮೇಲೆ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿಗಳು ಬರುತ್ತವೆ ?

†Indicates that the remarks or speeches have not been revised by the member concerned

ಶ್ರೀಮತಿ ಯಶೋಧರ ದಾಸಪ್ಪ.—ಇದು ಸೋಷಿಯರ್ ವೆಲ್‌ಫೇರ್ ಬೋರ್ಡಿನಿಂದ ಗ್ರಾಂಟು ಕೊಡುವುದು. ಬೇರೆ ಇಲಾಖೆಯಿಂದ ಕೊಡುವುದನ್ನು ಮಾತ್ರ ಇಲ್ಲಿ ಕೊಟ್ಟಿದೆ. ಬೇರೆ ಇಲಾಖೆಯಿಂದ ಸಹ ಕೊಡುತ್ತಾರೆ, ಇನ್ನು 75 ರಷ್ಟು ಸರ್ಕಾರದವರು ಕೊಡುತ್ತಾರೆ. ಬೇರೆ ಇಲಾಖೆಗಳ ಮೂಲಕ ಬೇರೆ ಯೋಜನೆಗಳಲ್ಲಿ ಬಾವಿಗಳನ್ನು ಕೊಡಿಸಬಹುದು. ನಮ್ಮ ಇಲಾಖೆಯಿಂದ ಕೊಡುವುದನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸಂಬಂಧಪಟ್ಟದ್ದನ್ನು ಮಾತ್ರ ಕೇಳಿರುವುದು. ಅವರಿಗೆ ಎರಡು ಯೋಜನೆಗಳಲ್ಲಿ ಇಷ್ಟು ಬಾವಿಗಳನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ಮಿಕ್ಕ ಕಡೆ ಕುಡಿಯುವ ನೀರಿನ ಬಾವಿಗಳನ್ನು ತೆಗೆದುಕೊಂಡರೆ ಅದಕ್ಕೆ ಪೂರ್ತಿ ಹಣವನ್ನು ಸರ್ಕಾರ ಕೊಡಬೇಕಾಗುತ್ತದೆ, ಅವುಗಳನ್ನೂ ತೆಗೆದುಕೊಳ್ಳುತ್ತೀರ?

ಶ್ರೀಮತಿ ಯಶೋಧರ ದಾಸಪ್ಪ.—ನಮ್ಮ ಕಡೆಯಿಂದ ಗ್ರಾಂಟು ಬರುವುದರಲ್ಲಿ 12 ಬಾವಿಗಳು ಆಗಿವೆ, ಬೇರೆ 12 ಆಗಿವೆ, ಒಟ್ಟು 24 ಆಗಿವೆ. ಇನ್ನು ಪೂರ್ತಿ ಗ್ರಾಂಟು ಕೊಡಬೇಕಾದರೆ, ಆಯಾ ಜನಸಂಖ್ಯೆಯನ್ನು ನೋಡಿಕೊಂಡು ಕೊಡಬೇಕಾಗುತ್ತದೆ. ಈ ಆಧಾರದಮೇಲೆ ಸೋಷಿಯಲ್ ವೆಲ್‌ಫೇರ್ ಇಲಾಖೆ ಪೂರ್ತಿ ಗ್ರಾಂಟು ಕೊಡುವುದು. ಬೇರೆ ಕಡೆ ಕೂಡ ಅವಶ್ಯಕತೆಯಿದ್ದರೆ ಅದನ್ನು ನೋಡಿಕೊಂಡು ಮಾಡುತ್ತಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಬೇರೆ ಕಡೆ ತೆಗೆದುಕೊಂಡರೆ ಗ್ರಾಮಪಂಚಾಯಿತಿ ಅಥವಾ ತಾಲ್ಲೂಕು ಬೋರ್ಡ್ ತೆಗೆದುಕೊಳ್ಳಬೇಕಾಗುತ್ತದೆ, ಅವರಿಗೆ ಸಾಕಷ್ಟು ಶಕ್ತಿ ಇಲ್ಲದೇಯಿರುವುದರಿಂದ ಸಾಕಷ್ಟು ಬಾವಿಗಳನ್ನು ಮಾಡಿಲ್ಲ. ಅವರಿಗೆ ಹಣಸಹಾಯ ಮಾಡುತ್ತೀರ? ಒಂದು ದೊಡ್ಡ ಯೋಜನೆ ಮಾಡಿ ಎಲ್ಲ ಗ್ರಾಮಗಳಿಗೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರ?

ಶ್ರೀಮತಿ ಯಶೋಧರ ದಾಸಪ್ಪ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಬೇರೆ ಬೇರೆ ಯೋಜನೆಗಳಿವೆ; ಶೇಕಡ 25 ಮತ್ತು 75 ಅವರು ಕೊಡುವುದು, ಇವರು ಕೊಡುವುದು ಎಂದು ಹೇಳಿದರೇನು ಪ್ರಯೋಜನ? ಹೀಗೆ ಕಾರಣಗಳನ್ನು ಹೇಳುವುದಕ್ಕೆ ಬದಲು ಬೇರೆ ಒಂದು ನಮಗ್ರ ಯೋಜನೆ ಮಾಡಿ ಪೂರ್ತಿಯಾಗಿ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುತ್ತಾರೆಯೇ?

ಶ್ರೀಮತಿ ಯಶೋಧರ ದಾಸಪ್ಪ.—ಸರಕಾರದವರು ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಕೊಡಬೇಕೆಂದು ಮೊದಲೇ ಯೋಜನೆ ಹಾಕಿಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದರಲ್ಲಿ ಎಲ್ಲ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಬೇರೆ ಬಾವಿಗಳು ಬೇಕೋ ಅಲ್ಲಿ ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಸ್ಪೆಷಲ್ ಗ್ರಾಂಟು ಕೊಟ್ಟು ಬಾವಿಗಳನ್ನು ತೆಗೆಸುತ್ತಿದ್ದೇವೆ. ಬೇರೆ ಕಡೆಗಳು, ಎಂದರೆ ಗ್ರಾಮಪಂಚಾಯತಿಗಳು, ಸಿ.ಡಿ.ಎಸ್. ಮುಂತಾದುವುಗಳ ಮೂಲಕವೂ ಬಾವಿಗಳಾಗುತ್ತಿವೆ. ಪ್ರತಿ ಹಳ್ಳಿಗೂ ಬಾವಿ ಕೊಡಬೇಕೆಂದು ಯೋಜನೆ ಇದೆ.

Sri ANGADI CHANNABASAPPA.—When the practice of untouchability is prohibited, is there need to provide separate wells for the use of the Scheduled Castes and Scheduled Tribes?

ಶ್ರೀಮತಿ ಯಶೋಧರ ದಾಸಪ್ಪ.—ಬಾವಿಗಳನ್ನು ತೆಗೆದಿದ್ದೇವೆ, ತೆಗೆದಮೇಲೆ ಅವನ್ನು ಎಲ್ಲರೂ ಉಪಯೋಗ ಮಾಡಬಹುದು.

ಶ್ರೀ ವಿ. ಎಸ್. ದೇವ್.—ನಮ್ಮ ಹಣದಲ್ಲಿ ಶೇಕಡ 25 ರಷ್ಟನ್ನೂ ಮಿಕ್ಕ 75 ರಷ್ಟನ್ನು ಅವರೂ ಕೊಡಬೇಕೆಂದು ಹೇಳಿದರಿ, ಪೂರ್ತಿ ಏಕೆ ಕೊಡಬಾರದು?

ಶ್ರೀಮತಿ ಯಶೋಧರ ದಾಸಪ್ಪ.—ನಾವು ಮಾಡಿಸಿದರೆ ನಮ್ಮಲ್ಲಿರುವ ಹಣದಲ್ಲಿ ನೂರಕ್ಕೆ ನೂರರಷ್ಟು ಕೊಡುತ್ತೇವೆ; ಎನ್.ಇ.ಎಸ್. ತೆಗೆಯಬೇಕಾದರೆ ಅದಕ್ಕೆ ಶೇಕಡ 25 ರಷ್ಟು ಹಣ ಕೊಡುತ್ತೇವೆ.

Sri J. P. SARWESH.—Will the Government consider the desirability of changing their present policy of sinking separate wells for the Scheduled Castes because the Scheduled Castes are there by separated permanently from the rest of the society?

ಶ್ರೀಮತಿ ಯಶೋಧರ ದಾಸಪ್ಪ.—ಷೆಡ್ಯೂಲ್ಡ್ ಕ್ಯಾಸ್ಟಿನವರು ಇರುವ ಭಾಗದಲ್ಲಿ ಬಾವಿಗಳನ್ನು ತೆಗೆದರೆ, ಅಲ್ಲಿ ರೆಫ್ಟ್‌ಹ್ಯಾಂಡ್‌ನವರಿಗೆ ಬೇರೆ, ರೈಟ್‌ಹ್ಯಾಂಡ್‌ನವರಿಗೆ ಬೇರೆ ಬಾವಿಗಳನ್ನು ತೆಗೆಯಿರಿ ಎಂದು ಹೇಳುತ್ತಾರೆ. ಇದು ಸಾಮಾಜಿಕ ಪ್ರಶ್ನೆಯಾಗಿದೆ. ಊರಿಗೆ ಒಂದು ಬಾವಿ ಇದ್ದರೆ ಅದನ್ನು ಎಲ್ಲರೂ ಉಪಯೋಗ ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಗೋಪಾಲ ನಾಲೆನ್ನ.—ಲೆಫ್ಟ್‌ಹ್ಯಾಂಡ್‌ನವರಿಗೆ ಬೇರೆ ರೈಟ್‌ಹ್ಯಾಂಡ್‌ನವರಿಗೆ ಬೇರೆ ಬೇರೆ ಕೇಳುತ್ತಾರೆಂದು ಹೇಳುತ್ತೀರಿ, ಅನ್ಯಶ್ಯತಾ ನಿವಾರಣಾ ಕಾನೂನನ್ನು ಜಾರಿಮಾಡಿ ಅಂಥವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರ?

ಶ್ರೀಮತಿ ಯಶೋಧರ ದಾಸಪ್ಪ. ಅದು ಕಷ್ಟದ ಕೆಲಸ. ಒಂದು ನಿದರ್ಶನವನ್ನು ಹೇಳುತ್ತೇನೆ. ಅರಸೀಕೆರೆಯ ಹತ್ತಿರ ಒಂದು ಹಳ್ಳಿ ಇದೆ, ಅಲ್ಲಿ ಒಂದು ಬಾವಿಯನ್ನು ಅರ್ಧ ತೆಗೆದಿದ್ದೇವೆ, ಅದು ರೈಟ್‌ಹಾಂಡ್‌ನವರಿಗಿರುವ ಕಡೆ ಎಂದು ಲೆಫ್ಟ್‌ಹ್ಯಾಂಡಿನವರು ಅದು ಬೇಡವೆಂದು ಹೇಳುತ್ತಾರೆ. ಮಧ್ಯೆ ತೆಗೆದಿದ್ದರೂ ಅದರಿಂದ ಬೆರಕೆಯಾಗುತ್ತದೆ, ಬೇಡವೆಂದು ಹೇಳಿ ಅಲ್ಲಿ ಯಾರೂ ನೀರನ್ನು ತೆಗೆದುಕೊಳ್ಳದೆ ಕೆರೆಯಿಂದ ನೀರು ತರುತ್ತಿದ್ದಾರೆ. ಯಾರು ಬೇಕಾದರೂ ಆ ಬಾವಿಯಿಂದ ನೀರು ತೆಗೆದ ಕೊಳ್ಳಲು ಅಡ್ಡಿ ಇಲ್ಲವೆಂದು ನಾವು ಹೇಳುತ್ತಿದ್ದೇವೆ. ಆದರೆ ಬಾವಿಯನ್ನು ತೆಗೆಯದೇ ಯಿರುವ ಹಾಗೆ ತೊಂದರೆ ಮಾಡುತ್ತಿದ್ದಾರೆ.

ಶ್ರೀ ವಿ. ಎಂ. ದೇವ್. ಎಡಗೈ ಮತ್ತು ಬಲಗೈ ಎಂಬ ತಾರತಮ್ಯ ತೆಗೆದುಹಾಕಲು ಏನಾದರೂ ಯೋಜನೆ ಮಾಡಿದ್ದಾರೆಯೇ? ಅದು ಯಾವ ಘಟ್ಟಕ್ಕೆ ಬಂದಿದೆ?

1-00 P.M.

ಶ್ರೀಮತಿ ಯಶೋಧರ ದಾಸಪ್ಪ.—ಈಗಾಗಲೇ ಜನರಲ್ ಹಾಸ್ಪೆಟ್ ಮಾಡಿ ಎಲ್ಲರಿಗೂ ಪ್ರವೇಶ ಕೊಟ್ಟಿದೆ. ಈ ತಾರತಮ್ಯ ತೆಗೆದುಹಾಕುವುದಕ್ಕೆ ಜನ ಮುಂದೆ ಬಂದರೆ ಅದಕ್ಕಿಂತ ಸಂತೋಷದ ವಿಚಾರ ಬೇರೆ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅನ್ಯಶ್ಯತೆ ನಿವಾರಣೆಯಾಗಬೇಕು ಎಂದು ಹೇಳುತ್ತೀರಿ. ಆದರೆ ಬೇರೆ ಬಾವಿ ತೆಗೆಸಿಕೊಟ್ಟು ನೀರು ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಇದು ಒಂದಕ್ಕೊಂದು ಸಂಬಂಧವಿಲ್ಲ. ಅನ್ಯಶ್ಯತಾ ನಿವಾರಣಾ ಕಾನೂನನ್ನು ತೆಗೆದುಹಾಕಿ. ಇಲ್ಲದಿದ್ದರೆ ಕಾಮನ್ ವೆಲ್ಸ್ ಇರಬೇಕೆಂದು ಕಾನೂನು ಮಾಡಿ. ಒಂದು ಖಚಿತ ನಿರ್ಧಾರ ತೆಗೆದುಕೊಳ್ಳುತ್ತೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಒಂದು ಹಳ್ಳಿಗೆ ಒಂದೇ ಬಾವಿ ಇರಬೇಕು ಎಂದು ಮಾಡಬೇಕು. ಈಗ ಕಾನೂನು ಇದ್ದರೂ ಹಳ್ಳಿಗಳಲ್ಲಿ ಅದು ಅನುಷ್ಠಾನಕ್ಕೆ ಬರುತ್ತಾ ಇಲ್ಲ. ಇದಕ್ಕೆ ಪರಿಹಾರ ತಾವೇ ಹೇಳಬೇಕು. ಸರಕಾರ ಏನುಬೇಕಾದರೂ ಮಾಡಲು ಸಿದ್ಧವಿದೆ. ಕಾನೂನು ಇದ್ದರೂ ಅದನ್ನು ಉಲ್ಲಂಘಿಸಲಾಗುತ್ತಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬಾವಿ ತೆಗೆಯಿಸಿ ಇವರ ಕೊಡದಿಂದ ನೀರು ತೆಗೆಯುವುದು ಅವರ ಕೊಡದಿಂದ ನೀರು ತೆಗೆಯುವುದು ಎಂಬ ತಾರತಮ್ಯ ತೆಗೆದುಹಾಕಲು, ಎಲ್ಲಿ ಇಲೆಕ್ಟ್ರಿಕ್ ಕರೆಂಟ್ ಇದೆಯೋ ಅಲ್ಲಿ ಇಲೆಕ್ಟ್ರಿಕ್ ಮೋಟಾರ ಕೂಡಿಸಿ ನಲ್ಲಿ ಇಟ್ಟು ಬಾವಿಯಿಂದ ನೀರು ಪಡೆಯುವುದಕ್ಕೆ ಸರಕಾರ ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ?

Mr. SPEAKER.—It is a suggestion for consideration.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಎಡಗೈ ಹಾಗು ಬಲಗೈ ತಿಕ್ಕಾಟ ಇದೆ; ಬಾವಿಗಳು ಆಗುವುದಿಲ್ಲ ಎಂದು ಹೇಳಿದಿರಿ. ಹಾಗಾದರೆ ಸರಕಾರಕ್ಕೆ ಇದುವರೆಗೆ ಬಾವಿಗಳು ಬೇಡ ಎಂದು ಅಂಥಾ ತಕರಾರುಗಳು ಎಷ್ಟು ಬಂದಿದೆ?

ಶ್ರೀಮತಿ ಯಶೋಧರ ದಾಸಪ್ಪ.—ಡೀಟೇಲ್ಸ್ ಬೇಕಾದರೆ ಒದಗಿಸುತ್ತೇನೆ.

ಶ್ರೀ ಕೆ. ಪಿ. ವೇಣುಗೋಪಾಲಸಿದ್ದಪ್ಪ.—ಯಾವ ಮಂತ್ರಿಯಾದರೂ ಟೂರ್ ಮೇಲೆ ಹೋದಾಗ್ಗೆ ಇಂಥ ಬಾವಿ ವ್ಯಾಜ್ಯ ಫೈನಲು ಮಾಡಿದ್ದಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾರ್ಕ್ಕೆಯಿದು ಕಡೆ ನಾನು ಮಾಡಿದ್ದೇನೆ.

Formation of a Committee at the District level in Hassan District for the collection of Defence Funds.

*Q.—286. Sri H. R. KESHAVA MURTHY (Gandasi).—

Will the Government be pleased to state :—

(*a*) whether it has come to their notice that a Committee has been formed at the District level in Hassan District for the collection of Defence Funds ;